ಶ್ರೀ ಹೆಚ್.ಸಿ.ಬಾಲಕೃಷ್ಣ: ಕೆಲಸ ಮಾಡಿಸುವವರು ನೀವು ಸ್ವಲ್ಪ ಬೇಗನೆ ಮಾಡಿಕೊಡಿ.

ಶ್ರೀ ಶಿವರಾಜ್ ಎಸ್.ತಂಗಡಗಿ: ಕೆಲಸ ಮಾಡಿಸಿ ಎಂದರೆ ಕೆಲಸ ಮಾಡಿಸುತ್ತೇವೆ. ಟೆಂಡರ್ ಕರೆಯಿರಿ ಎಂದರೆ ಟೆಂಡರ್ ಕರೆಯುತ್ತೇವೆ. ತಮ್ಮ ಅಭಿಪ್ರಾಯದಂತೆ ಮಾಡುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನೀವು ಹೇಗಾದರೂ ಮಾಡಿ, ಕೆಲಸ ಬೇಗ ಆಗಬೇಕು ಅಷ್ಟೇ.

5. ವಿಷಯ: ಮೂಡಿಗೆರೆ ತಾಲ್ಲೂಕಿನ ಸರ್ಕಾರಿ ಮಹಾವಿದ್ಯಾಲಯಗಳ ಕಟ್ಟಡದುರಸ್ತಿ ಬಗ್ಗೆ.

ಶ್ರಿ ಬಿ.ಬಿ.ನಿಂಗಯ್ಯ (ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ಮೂಡಿಗೆರೆ ಪಟ್ಟಣದಲ್ಲಿರುವ ಸರ್ಕಾರಿ ಕಿರಿಯ ಮಹಾವಿದ್ಯಾಲಯ (ಸಂಯುಕ್ತ) ಮತ್ತು ಬಾಲಕಿಯರ ಕಿರಿಯ ಮಹಾವಿದ್ಯಾಲಯ ಹಾಗೂ ಕಿರಿಯ ಮಹಾವಿದ್ಯಾಲಯ ಬಣಕಲ್ ಇವುಗಳ ಕಟ್ಟಡ ದುಸ್ತಿತಿಯಲ್ಲಿದ್ದು ಅವುಗಳ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಮೂಡಿಗೆರೆಯಲ್ಲಿ ಕಳೆದ ವರ್ಷ ಕಾಲೇಜುಗಳಲ್ಲಿ ಕೊಡೆ ಇಟ್ಟು ಕೊಂಡು ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾದ ಪರಿಸ್ಥಿತಿಯಿತ್ತು. ಈ ಬಾರಿ ಸಹ ಏನೂ ಕ್ರಮ ಕೈಗೊಂಡಿಲ್ಲ. ಮಳೆ ಪ್ರಾರಂಭವಾಗಿದೆ, ಮತ್ತೆ ಇದೇ ಪರಿಸ್ಥಿತಿಯಾಗುತ್ತದೆ.

ಅಧ್ಯಕ್ಷರು: ದುರಸ್ತಿ ಕೆಲಸ. ಮೊನ್ನೆ 40 ಲಕ್ಷ ಪ್ರತಿ ಕ್ಷೇತ್ರಕ್ಕೆ ಕೊಟ್ಟಿದಾರಲ್ಲ.

ಶ್ರೀ ಬಿ.ಬಿ.ನಿಂಗಯ್ಯ: ಅದು ಹೈಸ್ಕೂಲ್ ಕಟ್ಟಡಗಳ ದುರಸ್ತಿಗಾಗಿ. ಜೂನಿಯರ್ ಕಾಲೇಜಿಗಲ್ಲ.

ಅಧ್ಯಕ್ಷರು: ಜೂನಿಯರ್ ಕಾಲೇಜಿಗೂ ಕೊಟ್ಟಿದ್ದಾರೆ.

ಶ್ರೀ ಬಿ.ಬಿ.ನಿಂಗಯ್ಯ: ಕೊಟ್ಟಿದ್ದಾರೆ, ಆದರೆ ಇದು separate ಇದೆಯಲ್ಲ.

ಅಧ್ಯಕ್ಷರು: Estimate ಕಳುಹಿಸಿ. ಸಚಿವರೆ, ಉತ್ತರ ಹೇಳಿ. ಜೂನಿಯರ್ ಕಾಲೇಜಿಗೆ ಕೊಡಬಹುದು.

ಡಾ.ಹೆಚ್.ಸಿ.ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಪರವಾಗಿ): ಮಾನ್ಯ ಅಧ್ಯಕ್ಷರೆ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ ಕಾಲೇಜಿನಲ್ಲಿ ಆರು ತರಗತಿ ಕೊಠಡಿಗಳು ಹಾಗೂ ಎರಡು ಪ್ರಯೋಗಾಲಯ ತರಗತಿ ಕೊಠಡಿಗಳಿರುತ್ತದೆ. ಈ ಕಾಲೇಜಿನಲ್ಲಿ ಸೋರುತ್ತಿರುವ ಕೊಠಡಿಗಳ ದುರಸ್ತಿಯ ಕುರಿತಂತೆ ಸ್ಥಳಿಯ ದಾನಿಗಳಿಂದ ಸೋರಿಕೆಯನ್ನು ತಡೆಗಟ್ಟಲು ಚಾವಣಿಗಳ ಮೇಲೆ ರಬ್ಬರ್ ಶೀಟನ ಲೇಪನವನ್ನು ಮಾಡಿಸಿರುತ್ತಾರೆ.

ಈ ಕಾಲೇಜಿಗೆ ನಬಾರ್ಡ್ ಸಹಯೋಗದ ಆರ್ಐಡಿಎಪ್–11ರ ಯೋಜನೆಯಡಿ ಎರಡು ಕೊಠಡಿ ಹಾಗೂ ಆರ್ಐಡಿಎಪ್–12ರ ಯೋಜನೆಯಡಿ ಎರಡು ಕೊಠಡಿಗಳನ್ನು ನಿರ್ಮಿಸಲಾಗಿದೆ. ಹಾಲಿ ನಬಾರ್ಡ್ ಸಹಯೋಗದ ಆರ್ಐಡಿಎಪ್–11ರ ಯೋಜನೆಯಡಿ ನಿರ್ಮಿಸಿರುವ ಕೊಠಡಿಯ ಸ್ವಲ್ಪ ಪ್ರಮಾಣದಲ್ಲಿ ಸೋರುತ್ತಿರುತ್ತದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು ಬಣಕಲ್, ಮೂಡಿಗೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ 05 ಕೊಠಡಿಗಳಿರುತ್ತದೆ. ಸರ್ಕಾರಿ ಪದವಿ ಪೂರ್ವ ಕಾಲೇಜು, ಬಣಕಲ್, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಈ ಕಾಲೇಜುಗಳಿಗೆ ನಬಾರ್ಡ್ ಸಹಯೋಗದ ಆರ್ಐಡಿಎಪ್–15ರ ಯೋಜನೆಯಡಿ 2 ಕೊಠಡಿಗಳನ್ನು ನಿರ್ಮಿಸಲಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜು, ಬಣಕಲ್, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಈ ಕಾಲೇಜಿನ ದುರಸ್ತಿಗೆ ಕಾಲೇಜಿನ ಸಂಚಿತ ನಿಧಿಯಲ್ಲಿ ಲಭ್ಯವಿರುವ ಮೊತ್ತದಿಂದ ಅಲ್ಪ ಪ್ರಮಾಣದ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು, **ಬಣಕಲ್** ಇಲ್ಲಿಗೆ ನಿರ್ಮಿಸಿರುವ ಕೊಠಡಿಗಳು ಸುಸ್ಥಿಯಲ್ಲಿರುತ್ತವೆ. ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ ಈ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ದಕ್ಕೆಯಾಗದಂತೆ ನೋಡಿಕೊಳ್ಳಲು ಕಾಲೇಜಿನ ಮೇಲ್ಮಹಡಿಯಲ್ಲಿರುವ ಆಡಿಟೋರಿಯಂನಲ್ಲಿ ಎರಡು ವಿಭಾಗಗಳನ್ನು ಮಾಡಿ ಹಾಗೂ ಗಣಕ ಕೊಠಡಿಯನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳಿಗೆ ಇಂತಹ ಸಂದರ್ಭಗಳಲ್ಲಿ ಕ್ರಮವಹಿಸಲಾಗುತ್ತಿದೆ.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, **ಮೂಡಿಗೆರೆ** ಹಾಗೂ ಬಣಕಲ್ ಈ ಕಾಲೇಜುಗಳ ದುರಸ್ತಿಯ ಕುರಿತಂತೆ ಪದವಿ ಪೂರ್ವ ಶಿಕ್ಷಣ ಇಲಾಖಾ ನಿರ್ದೇಶಕರೂ ಸಹ ಸದರಿ ಕಾಲೇಜುಗಳಿಗೆ ಭೇಟ್ಟಿ ನೀಡಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮೂಡಿಗೆರೆ ಇವರಿಂದ ದುರಸ್ತಿಯ ಕುರಿತಂತೆ 21.75 ಲಕ್ಷರೂಗಳ ಅಂದಾಜು ಪಟ್ಟಿಯನ್ನು ಪಡೆದಿದ್ದು, ಹೆಚ್ಚುವರಿ ಅನುದಾನಕ್ಕಾಗಿ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಮಂಜೂರಾತಿ ನೀಡಿದ ನಂತರ ಅನುದಾನದ ಲಭ್ಯತೆಯನ್ನು ಆಧರಿಸಿ, ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಹೆಚ್ಚಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸರ್ಕಾರಿ ಪ್ರೌಢ ಶಾಲೆಗಳಿಂದ ಹಾಗೂ ಪ್ರಥಮ ದರ್ಜೆ ಕಾಲೇಜುಗಳಿಂದ ಬೇರ್ಪಟ್ಟರೂ ಸಹ ಅವುಗಳ ಹಾಲಿ ಸದರಿ ಸ್ಥಳಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನೇ ಉಪಯೋಗಿಸಿಕೊಳ್ಳುತ್ತಿವೆ. ಅದೇ ರೀತಿಯಾಗಿ ಮೂಡಿಗೆರೆ ಮತ್ತು ಬಣಕಲ್ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ಪರಿಸ್ಥಿತಿಯು ಇದ್ದು. ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ 2005ರಲ್ಲಿ ನಿರ್ಮಿಸಿರುವ ಎರಡು ಕೊಠಡಿಗಳನ್ನು ಹೊರತುಪಡಿಸಿ ಉಳಿದೆಲ್ಲ ಕೊಠಡಿಗಳು ಸುಸ್ಥಿಯಲ್ಲಿರುತ್ತದೆ. ಅಲ್ಲದೆ ಸದರಿ ಎರಡು ಕೊಠಡಿಗಳ ದುರಸ್ತಿಯ ಕುರಿತಂತೆ ಅನುದಾನದ ಲಭ್ಯತೆಯನ್ನಾದರಿಸಿ ನವೀಕರಿಸಲು ಕ್ರಮಕೈಗೊಳ್ಳಲಾಗುವುದು.

ಅಧ್ಯಕ್ಷರು: ಅಂದಾಜು ಕಳುಹಿಸಿದ್ದಾರೆ.

ಶ್ರೀ ಬಿ.ಬಿ.ನಿಂಗಯ್ಯ: ಕಳುಹಿಸಿಲ್ಲ.

ಡಾ.ಹೆಚ್.ಸಿ.ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಇಗಾಗಲೇ ಕೊಟ್ಟಿದ್ದೇವೆ, ನಮ್ಮ ಹಣಕಾಸಿನ ಪರಿಸ್ಥಿತಿ ಯನ್ನು ನೋಡಿಕೊಂಡು ಎರಡು ಕೊಠಡಿ ಕಟ್ಟುವುದಕ್ಕೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಬಿ.ಬಿ.ನಿಂಗಯ್ಯ: ಉತ್ತರದಲ್ಲಿ ಇರುವುದನ್ನು ನಿರ್ವಹಣೆ ಮಾಡಿಕೊಂಡು ಹೋಗಿ ಎಂದು ಹೇಳಿದ್ದಾರೆ, ನಾವು ಮಲೆನಾಡಿಗರು, ಮಕ್ಕಳು ಮಳೆಯಲ್ಲಿ ಕುಳಿತುಕೊಳ್ಳುವಂಥ ಪರಿಸ್ಥಿತಿ ಇದೆ, ತಕ್ಷಣ ರೂ.ಗಳನ್ನು ಮಂಜೂರು ಮಾಡಿಕೊಡುತ್ತೇವೆಂದು ಹೇಳಿ.

ಅಧ್ಯಕ್ಷರು: ಎಲ್ಲಾ ಪರಿಸ್ಥಿತಿ ಗೊತ್ತಿದೆ, ತಕ್ಷಣ ಮಾಡಿ.

6.ವಿಷಯ : ಹೇರೋಹಳ್ಳಿ, ಅಂದ್ರಹಳ್ಳಿ, ನೆಲಗದಿರೇನಹಳ್ಳಿ ಮಾರ್ಗವಾಗಿ ತುಮಕೂರು [ಎನ್.ಹೆಚ್.–4] ರಸ್ತೆಗೆ ಸೇರುವ ಅಭಿವೃದ್ಧಿ ಪ್ರಾಧಿಕಾರ ರಸ್ತೆಯ ದುರಸ್ತಿ ಕಾಮಗಾರಿಗೆ ಸಂಬಂಧಿಸಿದ ಟೆಂಡರ್ ಕಾರ್ಯ ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಎಸ್.ಟಿ.ಸೋಮಶೇಕರ[ಯಶವಂತಪುರ]: ಮಾನ್ಯ ಅಧ್ಯಕ್ಷರೆ, ಹೇರೋಹಳ್ಳಿ, ಅಂದ್ರಹಳ್ಳಿ, ನೆಲಗದಿರೇಹಳ್ಳಿ ಮಾರ್ಗವಾಗಿ ತುಮಕೂರು [ಎನ್.ಹೆಚ್.–4] ರಸ್ತೆಗೆ ಸೇರುವ ಅಭಿವೃದ್ಧಿ ಪ್ರಾಧಿಕಾರ ರಸ್ತೆಯ ದುರಸ್ತಿ ಕಾಮಗಾರಿಗೆ ಸಂಬಂಧಿಸಿದ ಟೆಂಡರ್ ಕಾರ್ಯ ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಡಾ.ಹೆಚ್.ಸಿ.ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಹೇರೋಹಳ್ಳಿ, ಅಂದ್ರ ಹಳ್ಳಿ, ನೆಲಗದೀರೇನಹಳ್ಳಿ ಮಾರ್ಗವಾಗಿ ಬೆಂಗಳೂರು, ತುಮಕೂರು